(ಟಿ. ಎಚ್. ಮೂಡಲಗಿರಿಗೌಡ.)

ಅಂದಾಜು ಮಾಡಲಾಗಿತ್ತು. ಈಗ ಅದು ಒಂದು ಲಕ್ಷ ಚಿಲ್ಲರೆಗೆ ಇಳಿದಿದೆ. ಈ ಹಿಂದೆ ಈ ಮತದಹಳ್ಳದ ಕೆರೆಗೆ ಒಂದು ಲಕ್ಷದ ಅಂದಾಜನ್ನು ಮಾಡಲಾಗಿತ್ತು. ಈಗ ಅದು ತೊಂಭತ್ತೈಳು ಸಾವಿರಕ್ಕೆ ಇಳಿದಿದೆ. ಹೀಗೆ ನಾಲ್ಕು ಲಕ್ಷಕ್ಕೆ ಅಂದಾಜಾಗಿದ್ದ ಕೆರೆ ಈಗ ಆರು ಲಕ್ಷ ಚಿಲ್ಲರೆಗೆ ಏರಿರುವುದರಿಂದಲೂ ಮತ್ತು ಉಳಿದೆರಡು ಕೆರೆಗಳ ಅಂದಾಜನ್ನು ಈಗ ಇಳಿಸಿರುವುದರಿಂದಲೂ ಇದರಲ್ಲಿ ಸಂಬಂಧಪಟ್ಟವರ ಕೈವಾಡವಿದೆ ಎಂದು ಅರ್ಥ ಭಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಕಿಗಳಲ್ಲೇನೋ ವ್ಯತ್ಯಾಸವಿದೆ. ಆದರೆ ಕೈವಾಡವಿದೆ ಅನ್ನುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಗುಂಡಲಗೆರೆಗೆ ಎಕ್ಸೈರಿ ಬಗ್ಗೆ ಹೋಗಿದ್ದಾಗ ಈ ಕೆಲಸವನ್ನು ಮೊದಲು ಕೈಗೊಳ್ಳುವುದಾಗಿ ಹೇಳಿರಲಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋ ಚೀಸ್.

ಶ್ರೀ ಟಿ. ಎಚ್ ಮೂಡಲಗಿರಿಗೌಡ.—ಶ್ರೀಮಾನ್ ಬಿ. ಸಿ. ನಂಜುಂಡಯ್ಯನವರ ಪ್ರಶ್ನೆಯಲ್ಲಿ ಕೇಳಿರ ತಕ್ಕಂಥ ಎಲ್ಲಾ ವಿಚಾರಗಳನ್ನೂ investigate ಮಾಡುವವರೆಗೆ ಆ ಕೆಲಸಗಳನ್ನೆಲ್ಲಾ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಹುಚ್ಚೇಮಾಸ್ತಿಗೌಡ.—ಶ್ರೀ ಬಿ. ಸಿ. ನಂಜುಂಡಯ್ಯನವರ ಅಭಿಪ್ರಾಯದ ಪ್ರಕಾರ ಮೊದಲು ಈ ಹಿರೇಹಳ್ಳಿಯ ಹತ್ತಿರ ಇದ್ದ ಸೈಟನ್ನು ವ್ಯತ್ಯಾಸ ಮಾಡಿದ್ದರಿಂದ ತಾನೆ ಆ ಅಣೆಕಟ್ಟಿನ ಅಂದಾಜು ಆರು ಲಕ್ಷದ ಇಪ್ಪತ್ತು ಸಾವಿರಕ್ಕೆ ಏರಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಒಬ್ಬೊಬ್ಬ ಸದಸ್ಯರು ಹೇಳಿದ ಹಾಗೆಲ್ಲ ಈ ಅಂದಾಜಗಳು ಬದಲಾವಣೆಯಾಗುತ್ತವೆಯೋ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಬದಲಾವಣೆ ಆಗುವುದಕ್ಕೆ ಅವಕಾಶವಿದ್ದರೆ ಆಗ ತಾವು ಹೇಳಿದರೂ ಕೂಡ ಹಾಗೆ ಬದಲಾವಣೆ ಆಗಿಯೇ ಆಗುತ್ತದೆ.

Contribution and Water Rate for restoration of Tanks.

Q.—258. **Sri S. R. NAGAPPA SETTY** (Shimoga).—

Will the Government be pleased to state :—

(*a*) whether there is any Government Order that if tanks are restored the land-holders have to give contribution and water rate per acre ;

(*b*) the rate of land revenue collected per acre under (i) rainfed paddy land (wet land), (ii) tank atchkat wet land, (iii) channel fed wet land where the security of water is given ;

(*c*) when the order was issued to levy water rate if the tanks are repaired ?

A.—**Sri Kadidal MANJAPPA** (Minister for Revenue and Public Works).—

(*a*) There is statutory provision, *vide* Chapter VI of Mysore Irrigation Act.

	Max.		*Average.*	
(*b*)	Rs. a. p.		Rs. a. p.	
(i) Rain-fed paddy land (wet)	... 3 8 0	...	1 14 6	
(ii) Tank atchkat wet land	... 10 0 0	...	4 9 3	
(iii) Channel fed wet land	... 14 4 0	...	7 1 3	
(*c*) No such order has been issued.				

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಳೆಯ ನೀರನ್ನೊದಗಿಸಿಕೊಂಡು ಬತ್ತದ ಬೆಳೆಯನ್ನು ತೆಗೆಯುವಂಥ ತರೀ ಜಮೀನುಗಳ ಕಂದಾಯಕ್ಕಿಂತ, ಕೆರೆ ನೀರನ್ನು ಒದಗಿಸಿ ಬತ್ತದ ಬೆಳೆಯನ್ನು ತೆಗೆಯುವಂಥ ತರೀ ಜಮೀನುಗಳಿಗೆ ಕಂದಾಯ ಜಾಸ್ತಿ ಹಾಕಿರ ತಕ್ಕದ್ದು ಆ ಕೆರೆಯ ನೀರನ್ನು ಈ ವ್ಯವಸಾಯಕ್ಕೋಸ್ಕರ ಶಾಶ್ವತವಾಗಿ ಒದಗಿಸಿಕೊಡುತ್ತಿರುವುದೇ ಕಾರಣ ವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಅದಕ್ಕಾಗಿಯೇ ಆ ಜಮೀನುಗಳಿಗೆ ಕಂದಾಯ ಜಾಸ್ತಿ ಹಾಕಿರುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಾವು ಹಾಗೆ ನೀರನ್ನು ಒದಗಿಸದೆ ಇಲ್ಲಿಯವರೆಗೆ ಯಾವ ಕಂದಾಯ ವನ್ನೂ ವಸೂಲಾಗಿಲ್ಲವೇ ?

Sri Kadidal MANJAPPA.—That is too general a question.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗೆ ತಾವು ಕೆರೆಗಳಿಂದ ನೀರನ್ನೂ ಸಹ ಅನೇಕ ವರ್ಷಗಳವರೆಗೆ ಒದಗಿಸದೆ ಇದ್ದಾಗ್ಯೂ ಪೂರ್ತಿ ಕಂದಾಯವನ್ನು ವಸೂಲಾಗಿಸಿಕೊಂಡು ಈಗ ಮತ್ತೆ ಅದರ ರಿಪೇರಿಗಾಗಿ ರೈತರಿಂದ ವಾಟರ್ ರೇಟನ್ನು ಬೇರೆ ಕೊಡಿ ಎಂದು ಅದನ್ನೂ ವಸೂಲಾಗಿಸುತ್ತಿರುವುದು ಯಾವ ನ್ಯಾಯ ?

Sri Kadidal MANJAPPA.—It is laid down in the Irrigation Act.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ತಾವು ಅನೇಕ ವರ್ಷಗಳಿಂದ ನೀರನ್ನೇ ಕೊಡದಿದ್ದರೂ ಪೂರ್ತಿ ಕಂದಾಯ ವಸೂಲಾಗಿಸಿಕೊಂಡಿದ್ದರಲ್ಲಿ ಈ ವಾಟರ್ ರೇಟೂ ಸೇರಿರುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಹಾಗೆ ನೀರು ನರಬರಾಯಿಗಾಗಿ ವಾಟರ್ ರೇಟನ್ನು ಕೇಳುವುದಿಲ್ಲ. ಕೆರೆ ರಿಪೇರಿ ಬಗ್ಗೆ ಇರಿಗೇಷನ್ ಆಕ್ಟ್ ಪ್ರಕಾರ ಅದನ್ನು ವಿಧಿಸುತ್ತಿದ್ದೇವೆ. ಹಾಗೆ ಅದರಲ್ಲಿ ಇದು ವಿಧಾಯಕವಾಗಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಾವು ಸಾಕಷ್ಟು ನೀರನ್ನು ನರಬರಾಯಿ ಮಾಡದೆ ಇದ್ದಾಗ್ಗೂ ಪೂರ್ತಿ ಕಂದಾಯ ವಸೂಲ್ಮಾಡಿಕೊಂಡಿರುವುದರಲ್ಲಿ ಈ ವಾಟರ್ ರೇಟೂ ಸಹ ಸೇರಿಕೊಂಡು ಬಂದಂತಾಗಿದ್ದರೂ ತಾವು ಪುನಃ ಇದನ್ನು ಹೇಗೆ ತೆಗೆದುಕೊಳ್ಳುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಮೊದಲು ನರಬರಾಯಿ ಮಾಡುತ್ತಿದ್ದಂಥ ನೀರಿನ ಜೊತೆಗೆ ಮತ್ತಷ್ಟು ಹೆಚ್ಚಿಗೆ ನೀರನ್ನು ಶಾಶ್ವತವಾಗಿ ನರಬರಾಯಿ ಮಾಡತಕ್ಕ ಬಗ್ಗೆ ಇದನ್ನು ವಸೂಲ್ಮಾಡಬೇಕೆಂದು ಕಾನೂನಿನಲ್ಲೇ ವಿಧಾಯಕವಾಗಿದೆಯೆಂದು ಈಗ ತಾನೆ ತಿಳಿಸಿಲಿಲ್ಲವೇ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗಾದರೆ ಮೊದಲು ಕೆರೆಯಲ್ಲಿ ಬೆಳೆಗೆ ಎಷ್ಟು ಕೊಡಬೇಕೋ ಅಷ್ಟು ನೀರು ಇರಲಿಲ್ಲವೆಂತಲೋ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆಯಲ್ಲಿ ಮೊದಲೂ ನೀರಿತ್ತು. ಹೀಗೆ ಕೆರೆಯನ್ನು ರಿಪೇರಿಮಾಡಿದರೆ ಮತ್ತಷ್ಟು ನೀರನ್ನು ಹೆಚ್ಚಿಗೆ ನರಬರಾಯಿ ಮಾಡಬಹುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಳೆ ನೀರು ಬಂದು ತರಿ ಬೆಳೆಗಳಾಗತಕ್ಕ ತರಿ ಜಮೀನ್ ಕಂದಾಯಕ್ಕಿಂತಲೂ ವಿಪರೀತವಾಗಿ ಈ ಕೆರೆ ಆಶ್ರಯದ ಜಮೀನುಗಳಿಗೆ ಕಂದಾಯ ಹಾಕಿದ್ದೀರಿ. ಎಕರೆಗೆ 7 ರೂಪಾಯಿಗಳಿಂದ 10 ರೂಪಾಯಿಗಳವರೆಗೂ ಕಂದಾಯ ಹಾಕಿದ್ದೀರಿ. ಹೀಗೆ ಅಧಿಕ ಕಂದಾಯವನ್ನು ಹಾಕಿದ್ದಾಗ್ಗೂ ತಾವು ಪುನಃ ಅವರಿಂದ ಈ ವಾಟರ್ ರೇಟನ್ನು ಕೇಳುವುದು ನ್ಯಾಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಮಾನ್ಯ ವ್ಯವಸಾಯ ಸಚಿವರಾದ ಡಾ॥ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕಮಾಡಲಾಗಿದೆ. ಈ ಅಂಶಗಳನ್ನೆಲ್ಲಾ ಆ ಸಮಿತಿಯು ಪರಿಶೀಲನೆಮಾಡಿ ಸರ್ಕಾರಕ್ಕೆಂದು ಶಿಫಾರ್ಸನ್ನು ಕಳುಹಿಸಿಕೊಡುತ್ತಾರೆ. ಅನಂತರ ಈ ತೊಂದರೆಗಳೆಲ್ಲಾ ಇರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಆ ಸಮಿತಿ ಇಡೀ ಸಂಸ್ಥಾನಕ್ಕೆ ಅನ್ವಯಿಸತಕ್ಕದ್ದೋ ಅಥವಾ ಕೇವಲ ಒಂದು ನಿರ್ದಿಷ್ಟವಾದ ಸಂದರ್ಭಕ್ಕೆ ಮಾತ್ರ ಅನ್ವಯಿಸತಕ್ಕದ್ದೋ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಎಲ್ಲಾಕಡೆಗೂ ಅನ್ವಯಿಸುತ್ತದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ಎಕರೆಗೆ 10 ರೂಪಾಯಿ ವಾಟರ್ ರೇಟನ್ನು ಕೇಳಿರತಕ್ಕದ್ದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಕೆಲವು ಕಡೆ ಕೇಳಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನೀರನ್ನು ನರಬರಾಯಿ ಮಾಡದೆ ಇದ್ದರೂ ಈ ವಾಟರ್ ರೇಟನ್ನು ವಸೂಲ್ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆ ಸಂದರ್ಭವೇ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನೀರು ಬಾರದೆ ಇದ್ದಾಗ ಕಂದಾಯ ವಸೂಲ್ಮಾಡುವುದನ್ನು ಬಿಟ್ಟು ಬಿಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೀರು ಬಿಡದೆಇದ್ದಾಗ ಕಂದಾಯವನ್ನು ರೆಮಿಷನ್ ಮಾಡುವುದಿಲ್ಲ. ಮಳೆ ಬಾರದಿದ್ದಾಗ ರೆಮಿಷನ್ ಮಾಡಲಾಗುತ್ತಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗೆಮಳೆಯೇ ಬಾರದಿದ್ದಾಗ ಕೆರೆಗಿನ್ನೆಲ್ಲ ನೀರು ಬರುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆಗೆ ನೀರೇ ಬಾರದಿದ್ದರೆ ಆಗಲೂ ರಿಮಿಷನ್ ಕೊಡಲಾಗುತ್ತಿದೆ.

ಶ್ರೀ ಎಲ್. ಸಿದ್ದಪ್ಪ.—ಒಂದೆರಡುಸಲ ರಿಪೇರಿ ಮಾಡಿದಾಗ ಈ ವಾಟರ್ ರೇಟನ್ನು ವಸೂಲ್ಮಾಡಿಕೊಂಡಿದ್ದು ಪುನಃ ಅದನ್ನು ಪದೇಪದೇ ರಿಪೇರಿಮಾಡತಕ್ಕ ಸಂದರ್ಭ ಬಂದರೆ ಪ್ರತಿಸಲಕ್ಕೂ ಹೀಗೆಯೇ ವಾಟರ್ ರೇಟನ್ನು ವಸೂಲ್ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳುವುದರಲ್ಲಿ ಅರ್ಥವಿದೆ. ಆ ಸಮಿತಿಯ ವರದಿ ಬಂದನಂತರ ಈ ಅಂಶಗಳನ್ನೆಲ್ಲಾ ಪರಿಶೀಲನೆ ಮಾಡಲಾಗುತ್ತದೆ.

Octroi on import of Handloom Goods.

Q.—392. **Sri M. PALANIYAPPAN** (Ulsoor).—

Will the Government be pleased to state:—

(*a*) whether it is a fact that octroi is levied on import of handloom goods in the State;

(*b*) whether it is a fact that octroi is not collected on handloom clothes in other provinces;

(*c*) whether they have received any representation from the "All-India Handloom Weavers' Association" or from any other Association to abolish the same?

A.—**Sri T. CHANNIAH** (Minister for Public Health and Local Self-Government).—

(*a*) Yes, in some Municipalities.
(*b*) Information not available.
(*c*) Yes.

Sri M. PALANIYAPPAN.—Has the Government received any letter from the All-India Handloom Board in this connection?

Sri T. CHANNIAH.—Yes.

Sri M. PALANIYAPPAN.—May I know on what date it has been received by the Government?

Sri T. CHANNIAH.—In the month of September 1954.

Sri M. PALANIYAPPAN.—Were there any other reminders subsequent to that?